# ಕಡಿತ ಚಿಕ್ಕದು; ಕಂಟಕ ದೊಡ್ಡದು

**ಆಗಸ್ಟ್ 20 ವಿಶ್ವ ಸೊಳ್ಳೆ ದಿನ**

■ ಡಾ. ಡಿ.ಕೆ. ಮಹಾಬಲರಾಜು

ಸೊಳ್ಳೆಗಳಿಗೂ ಒಂದು ದಿನಾಚರಣೆ ಇದೆ ಎಂಬ ಸತ್ಯ ಪರಿಣಿತರಿಗೂ ವಿಸ್ಮಯ, ಹಾಸ್ಯಾಸ್ಪದ ಎನಿಸುತ್ತದೆ. ಇಂದಿಗೆ ಸರಿಯಾಗಿ 127 ವರ್ಷಗಳ ಹಿಂದೆ, ಅಂದರೆ 1897ರ ಆಗಸ್ಟ್ 20 ರಂದು, ಸಿಕಂದರಬಾದ್‌ನ ಸದಾಂ ಪೇಟೆಯಲ್ಲಿ ವಾಸಿಸುತ್ತಿದ್ದ ರೊನಾಲ್ಡ್ ರಾಸ್ (ನೊಬೆಲ್ ಪ್ರಶಸ್ತಿ ವಿಜೇತ) ಎಂಬ ವಿಜ್ಞಾನಿ, ಸೊಳ್ಳೆಗಳು ಮನುಷ್ಯನಿಗೆ ಮಲೇರಿಯಾ ಕಾಯಿಲೆಯನ್ನು ಹರಡುತ್ತವೆ ಎಂದು ಕಂಡುಹಿಡಿದು ಜಗತ್ತನ್ನು ಅಚ್ಚರಿಗೊಳಿಸಿದ. ಈ ಸಂದರ್ಭದ ಸ್ಮರಣೆಗಾಗಿ ಪ್ರತಿವರ್ಷ ಆಗಸ್ಟ್ 20 ನ್ನು ವಿಶ್ವದಾದ್ಯಂತ 'ವಿಶ್ವ ಸೊಳ್ಳೆ ದಿನ' ಎಂದು ಘೋಷಿಸಲಾಗಿದೆ.

ಜಗತ್ತಿನಲ್ಲಿ ಜನಿಸಿದ ಸೊಳ್ಳೆಗಳಲ್ಲಿ ಕೇವಲ ಶೇಕಡ 10 ಸೊಳ್ಳೆಗಳಿಗೆ ಮಾನವನ ಮುಖ ದರ್ಶನವಾಗುತ್ತದೆ. ಇವುಗಳಲ್ಲಿ ಕೇವಲ ಒಂದು ಸೊಳ್ಳೆಗೆ ಮಾತ್ರ ಮಾನವನ ರಕ್ತ ಹೀರುವ ಭಾಗ್ಯ ದೊರೆಯುತ್ತಿದೆ. ಹೀಗಾಗಿ ಜಗತ್ತಿನಲ್ಲಿರುವ ಸೊಳ್ಳೆಗಳ ಸಂಖ್ಯಾಬಲವನ್ನು ಊಹಿಸಿಕೊಳ್ಳುವುದೇ ಅಸಾಧ್ಯ. ಸೊಳ್ಳೆಗಳು ಜಗತ್ತಿನೆಲ್ಲೆಡೆ ಇವೆ. ಸಮುದ್ರ ಮಟ್ಟಕ್ಕಿಂತ 4000 ಅಡಿ ಎತ್ತರದ ಪ್ರದೇಶಗಳಲ್ಲಿ ಮಾತ್ರ ಸೊಳ್ಳೆಗಳೇ ಇರುವುದಿಲ್ಲ.



ಕೆಲವೇ ಮಿ.ಮೀ. ಗಾತ್ರದ ಸೊಳ್ಳೆಗಳು ಮಾನವನ ಬಳಿಯೇ ವಾಸಿಸುತ್ತಾ ಅವರ ರಕ್ತ ವನ್ನೇ ಹೀರುತ್ತಾ, ಉಂಡ ಮನೆಗೆ, ದ್ರೋಹ ಬಗೆಯುತ್ತಾ, ಮಾನವನಿಗೆ ಸಡ್ಡು ಹೊಡೆಯುತ್ತಾ ಕಾಡುತ್ತಿವೆ. ಮನುಷ್ಯನ ಮಾರಣಹೋಮ ಮಾಡುತ್ತಲೇ ಮಲೇರಿಯಾ ರೋಮನ್ ಚಕ್ರಾಧಿಪತ್ಯವನ್ನು ಕೊನೆಗೊಳಿಸಿದೆ. ಸೂಯೆಜ್ ಕಾಲುವೆ ನಿರ್ಮಾಣಕ್ಕೆ ವಿಳಂಬ ಮಾಡಿದೆ. ಕೇವಲ ಸಾವು–ನೋವುಗಳಿಗೆ ನಿಮಿತ್ತವಾಗಿ ನಿಲ್ಲದೆ ಮಾನವ ದುಡಿಮೆಯ ದಿನಗಳನ್ನೂ ದೇಶದ ಆರ್ಥಿಕ ಸ್ಥಿತಿಯನ್ನೂ ಕೊಳ್ಳೆ ಹೊಡೆದಿದೆ. ಮಾನವನ ಜೀವದೊಡನೆ ಕಣ್ಣು ಮುಚ್ಚಾಲೆ ಯಾಡುತ್ತಲೇ ಅಸ್ತಿತ್ವವನ್ನು ಉಳಿಸಿಕೊಂಡಿರುವ ಸೊಳ್ಳೆಗಳು ಮಾನವನಿಗೆ ಮಲೇರಿಯಾ, ಡೆಂಗಿ, ಚಿಕುನ್‌ಗುನ್ಯಾ, ಮೆದುಳು ಜ್ವರ, ಆನೆಕಾಲು ರೋಗ ಮುಂತಾದ ಹಲವಾರು ಕಾಯಿಲೆಗಳನ್ನು ಹರಡುತ್ತಾ ಆರೋಗ್ಯವನ್ನು ಹಿಂಡಿ ಹಿಪ್ಪೆ ಮಾಡಿವೆ. ಸೊಳ್ಳೆಗಳ ಉಪಟಳದಿಂದ ಉಂಟಾಗಿರುವಷ್ಟು ಸಾವು ನೋವುಗಳು, ಯಾವುದೇ ಕಾಯಿಲೆಯಿಂದ, ಯುದ್ಧಗಳಿಂದ, ಭೂಕಂಪ, –ಪ್ರವಾಹ ಇತರೆ ಪ್ರಕೃತಿ ವಿಕೋಪಗಳಿಂದ ಸಂಭವಿಸಿಲ್ಲ ಎಂದರೆ ತಪ್ಪಿಲ್ಲ. ಕೀಟ ಏನೋ ಚಿಕ್ಕದು, ಆದರೆ ಅದರ ಕಡಿತದಿಂದ ಉಂಟಾಗುವ ಕಂಟಕಗಳು ದೊಡ್ಡದು.

ಪರಿಸರ ನಾಶದಿಂದ, ನೀರಿನ ಅಸಮರ್ಥ ಬಳಕೆಯಿಂದ ಉತ್ತಮ ಒಳಚರಂಡಿ ವ್ಯವಸ್ಥೆ ಇಲ್ಲದಿರು ವುದರಿಂದ, ಕೆರೆ, ಕಾಲುವೆ, ನದಿಗಳ ಸ್ವಚ್ಛತೆಗೆ ಗಮನ ನೀಡುವುದರಿಂದ, ಮನೆ ಮತ್ತು ಸುತ್ತಲಿನ ಪರಿಸರ ನೈರ್ಮಲ್ಯ ಕಾಪಾಡದೇ ಇರುವುದರಿಂದ, ಕಸ, ತ್ಯಾಜ್ಯಗಳನ್ನು ಸೂಕ್ತವಾಗಿ ವಿಲೇವಾರಿ ಮಾಡದಿರುವುದರಿಂದ, ಬಯಲಿನಲ್ಲೇ ಮಲವಿಸರ್ಜನೆ ಮಾಡುವುದರಿಂದ ಸೊಳ್ಳೆಗಳು ಹೆಚ್ಚಾಗಿ ರೋಗ ಹರಡುತ್ತವೆ. ■

